# ಸ್ವಾಮಿ ವಿವೇಕಾನಂದರ ಒಂದು ಅಪ್ರಕಟಿತ ಪತ್ರ

*(ಖೇತ್ರಿ ಮಹಾರಾಜರಿಗೆ ಬರೆದುದು)*

ಮುಂಬೈ
೧೮೯೩, ಮೇ ೨೨

**ಮಹಿಮಾನ್ವಿತ ಮಹಾರಾಜ,**

ಖೇತ್ರಿಯನ್ನು ಬಿಟ್ಟಾದ ಮೇಲೆ ನನ್ನ ಪ್ರಯಾಣದಲ್ಲಿ ಹೇಳಿಕೊಳ್ಳುವಂತಹ ಘಟನೆಯೇನೂ ನಡೆಯಲಿಲ್ಲ. ನನ್ನ ಪ್ರಯಾಣ ಅತ್ಯಂತ ಸುಖಮಯವಾಗಿತ್ತು. ಖರಾರಿಯಲ್ಲಿ ನನ್ನ ಪ್ರಯಾಣವನ್ನು ಮೊಟಕುಗೊಳಿಸಿ, ಅಲ್ಲಿಂದ ನದಿಯಾದ್ ಎಂಬ ಊರಿಗೆ ಹೋದೆನು. ಎಂದಿನಂತೆ, ಹರಿದಾಸ ಭಾಯಿ ನನ್ನ ವಿಷಯದಲ್ಲಿ ಸ್ನೇಹವನ್ನು ತೋರಿದರು. ನಾವಿಬ್ಬರೂ ಮಹಿಮಾನ್ವಿತರಾದ ಮಹಾರಾಜರಾದ ತಮ್ಮ ಬಗ್ಗೆ ಬಹಳಷ್ಟು ಮಾತನಾಡಿದೆವು. ಅದರ ಪರಿಣಾಮವಾಗಿ ಹರಿದಾಸ ಭಾಯಿ ತಮ್ಮನ್ನು ನೋಡಲು ಬಹಳ ಕಾತರರಾಗಿದ್ದಾರೆ. ಅವರು, ಬರುವ ಚಳಿಗಾಲದಲ್ಲಿ ಉತ್ತರಭಾರತಕ್ಕೆ ಪ್ರಯಾಣ ಮಾಡುವ ಸಂದರ್ಭದಲ್ಲಿ ತಮ್ಮನ್ನು ಭೇಟಿಮಾಡಿ, ಗೌರವ ತೋರಿಸಲು ಉತ್ಸುಕರಾಗಿದ್ದಾರೆ. ಕಾಥಿಯಾವಾಡ್ ಸಂಸ್ಥಾನದ ಕುಲಗುರುಗಳಾಗಿ ಸುಮಾರು ಇಪ್ಪತ್ತೈದು ವರ್ಷಗಳ ಅನುಭವವನ್ನು ಹೊಂದಿರುವ ಈ ವೃದ್ಧರನ್ನು ಭೇಟಿಮಾಡುವುದು, ಘನತೆವೆತ್ತ ಮಹಾರಾಜರಾದ ತಮಗೂ ಬಹಳ ಸಂತಸವನ್ನು ಉಂಟುಮಾಡೀತೆಂದು ನಾನು ಖಚಿತವಾಗಿ ಹೇಳಬಲ್ಲೆನು. ಅದೂ ಅಲ್ಲದೆ, ಹಿಂದಿನ ಕಾಲಕ್ಕೆ ಸೇರಿದ ಅತ್ಯಂತ ಸಂಪ್ರದಾಯಸ್ಥ ರಾಜಕಾರಣಿಗಳ ಪೈಕಿ ಉಳಿದುಕೊಂಡಿರುವುದು, ಬಹುಶಃ ಈಗ ಇವರೊಬ್ಬರೇ. ಅವರು ಈಗಾಗಲೇ ಅಸ್ತಿತ್ವದಲ್ಲಿ ಇರುವ ಆಡಳಿತ ಯಂತ್ರವನ್ನು ಸುವ್ಯವಸ್ಥಿತ ರೀತಿಯಲ್ಲಿಡುವ ಮತ್ತು ಆಮೂಲಾಗ್ರವಾಗಿ ಸಂಘಟಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ.

ಮುಂಬೈನಲ್ಲಿ ವಕೀಲಿ ವೃತ್ತಿಯಲ್ಲಿರುವ ನನ್ನ ಸ್ನೇಹಿತನಾದ ರಾಮದಾಸನನ್ನು ಕಾಣಲು ಹೋಗಿದ್ದೆನು. ಆತ ಒಬ್ಬ ಭಾವುಕ ಸಭ್ಯವ್ಯಕ್ತಿ. ಆತ ಮಹಿಮಾನ್ವಿತ ಮಹಾರಾಜರಾದ ತಮ್ಮ ಚಾರಿತ್ರ್ಯದಿಂದ ತುಂಬ ಪ್ರಭಾವಿತನಾಗಿದ್ದಾನೆ. ಸುಡು ಬೇಸಿಗೆಯಲ್ಲದೆ ಹೋಗಿದ್ದರೆ, ಅಂಥ ರಾಜನನ್ನು ಕಾಣಲು ಹಾರಿಕೊಂಡೇ ಹೋಗುತ್ತಿದ್ದುದಾಗಿ ಅವನು ನನಗೆ ಹೇಳಿದ. ಆತನ ತಂದೆ ಇದೇ ೩೧ ರಂದು ಶಿಕಾಗೋಗೆ ಹೋಗಲು ನಿರ್ಧರಿಸಿದ್ದಾರೆ. ಹಾಗೆ ಆದರೆ, ನಾವಿಬ್ಬರೂ ಒಟ್ಟಿಗೇ ಹೋಗುತ್ತೇವೆ. ಇಂದು ನಾನು ಕಬ್ಬಿಣದ ಪೆಟ್ಟಿಗೆ ಮುಂತಾದವುಗಳನ್ನು ಕೊಳ್ಳಲು ಹೋಗುತ್ತೇನೆ. ಮದ್ರಾಸಿನಿಂದ ಹಣ ಬರುವುದನ್ನೇ ನಾನು ಕಾಯುತ್ತಿದ್ದೇನೆ. ಅದಕ್ಕಾಗಿ ಜೈಪುರದಿಂದಲೇ ಒಂದು ತಂತಿ ಕಳಿಸಿದ್ದೆ. ಆದರೆ ಅನುಮಾನಪಟ್ಟು, ನನ್ನ ಮುಂದಿನ ಪತ್ರವ್ಯವಹಾರಕ್ಕೆ ಮದ್ರಾಸಿನವರು ಕಾದುಕೊಂಡಿದ್ದರು. ನಾನು ಅವರಿಗೆ ಮತ್ತೊಂದು ತಂತಿಯನ್ನು ಕಳಿಸಿದ್ದಷ್ಟೇ ಅಲ್ಲದೆ, ಪತ್ರವನ್ನೂ ಬರೆದಿದ್ದೇನೆ.

ದಾರಿಯಲ್ಲಿ ನನಗೆ ಜೈಪುರದ ಒಂದು ಶಾಲೆಯ ಮುಖ್ಯೋಪಾಧ್ಯಾಯನಾದ ರಾಮನಾಥನೊಡನೆ ಭೇಟಿಯಾಯಿತು. ವರ್ಷಗಳ ಹಿಂದೆ ಸಸ್ಯಾಹಾರದ ಸಂಬಂಧವಾಗಿ, ಅವನಿಗೂ ನನಗೂ ದೊಡ್ಡ ವಾಗ್ವಾದವೇ ನಡೆದಿತ್ತು. ಈ ನಡುವೆ ಆತನು ಕೆಲವು ಅಮೆರಿಕನ್ ಬರಹಗಾರರ ಸಂಪರ್ಕಕ್ಕೆ ಬಂದಿದ್ದನು. ಅವರು ಮಂಡಿಸಿರುವ ವಾದಗಳನ್ನು ಉಪಯೋಗಿಸಿಕೊಂಡು, ನನ್ನ ಮೇಲೆ ಎರಗಿದ. ಮನುಷ್ಯರ ಹಲ್ಲುಗಳೂ ಸೇರಿದಂತೆ, ಜೀರ್ಣಾಂಗಗಳೆಲ್ಲವೂ ಹಸುವಿನಂತೆ ಇವೆ ಎಂದು ಅವರಲ್ಲಿ ಒಬ್ಬ ಲೇಖಕ ಸಾಧಿಸಿರುವುದು ಇವನ ಬುದ್ಧಿಗೆ ಹಿಡಿಸಿದೆಯಂತೆ. ಆದ್ದರಿಂದ ಪ್ರಕೃತಿಯು ಮಾನವನನ್ನು ಸಸ್ಯಾಹಾರಿ ಪ್ರಾಣಿಯಾಗಿಯೇ ರಚಿಸಿದೆ ಎಂದು ಅವನು ಹೇಳುತ್ತಾನೆ. ಅವನೊಬ್ಬ ಸಭ್ಯವ್ಯಕ್ತಿಯಾದ್ದರಿಂದ, ಅಮೆರಿಕದ ಆ ಹವ್ಯಾಸಿ ಲೇಖಕನ ಮೇಲೆ ಅವನಿಗಿದ್ದ ನಂಬಿಕೆಯನ್ನು ನಾನು ಕದಲಿಸಲು ಹೋಗಲಿಲ್ಲ. ಆದರೆ ಒಂದು ಮಾತಂತೂ ನನ್ನ ನಾಲಗೆಯ ತುದಿಗೆ ಬಂದು ನಿಂತಿತ್ತು. ಒಂದು ವೇಳೆ ನಮ್ಮ ಮತ್ತು ಹಸುವಿನ ಜೀರ್ಣಾಂಗಗಳು ಒಂದೇ ರೀತಿಯ ರಚನೆಯುಳ್ಳವಾಗಿದ್ದರೆ, ಆಗ ನಾವು ಹುಲ್ಲನ್ನೇ ತಿಂದು ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿತ್ತು. ಇದು ನಿಜವಾಗಿದ್ದರೆ, ಯಥೇಚ್ಛವಾಗಿ ಸಿಗುವ ನೈಸರ್ಗಿಕ ಆಹಾರವಾದ ಹುಲ್ಲನ್ನು ತಿನ್ನುವುದನ್ನು ಬಿಟ್ಟು, ಬರಗಾಲದ ಸಮಯದಲ್ಲಿ ಹೊಟ್ಟೆಗೆ ಆಹಾರವಿಲ್ಲದೆ ಸಾಯುತ್ತಿರುವ ನಮ್ಮ ಬಡ ಭಾರತೀಯರು ನಿಜಕ್ಕೂ ಮೂರ್ಖರೇ ಸರಿ! ಮಹಿಮಾನ್ವಿತ ಮಹಾರಾಜರಾದ ತಮ್ಮ ಸೇವಕರು, ಹತ್ತಿರದಲ್ಲಿರುವ ಗುಡ್ಡವನ್ನು ಏರಿದರೆ ಸಾಕು, ಹೊಟ್ಟೆ ತುಂಬುವಷ್ಟು ಹುಲ್ಲು ಸಿಗುವಾಗ ಅದನ್ನು ಬಿಟ್ಟು ತಮ್ಮ ಚಾಕರಿಯಲ್ಲಿದ್ದುಕೊಂಡು, ತಮ್ಮ ಸೇವೆ ಮಾಡುತ್ತಿರುವುದು ಅವರ ಮೂರ್ಖತನವೇ ಸರಿ! ನಿಜವಾಗಿಯೂ ಇದು ಅಮೆರಿಕದ ಅದ್ಭುತ ಆವಿಷ್ಕಾರ!! ಈ ಅದ್ಭುತ ಅಮೆರಿಕದವನಿಗೆ ಹಾಗೂ ಅವನ ಈ ಭಾರತೀಯ ಶಿಷ್ಯನಿಗೆ ಭಾರತೀಯ ಮಾನವ–ಹಸುಗಳ ಪವಿತ್ರ ಸಗಣಿಯಿಂದಲೂ ಉಪಕಾರವಾದೀತೆಂದು ನಾನು ಭಾವಿಸುತ್ತೇನೆ. ಹೀಗಿದೆ ಅವನ ಹಸು–ಮನುಷ್ಯ ಸಿದ್ಧಾಂತ.


ಮಹಿಮಾನ್ವಿತ ಮಹಾರಾಜರಲ್ಲಿ ವಿಶೇಷವಾಗಿ ಹೇಳಿಕೊಳ್ಳುವಂಥದ್ದು ಇನ್ನೇನೂ ಇಲ್ಲದ್ದರಿಂದ ಇಲ್ಲಿಗೇ ನಿಲ್ಲಿಸುತ್ತೇನೆ. ಸಕಲ ಕಲ್ಯಾಣಗಳನ್ನು ಕರುಣಿಸುವ ಆ ಭಗವಂತನು ನಿಮ್ಮ ಮತ್ತು ನಿಮ್ಮವರೆಲ್ಲರ ಮೇಲೆ ತನ್ನ ಆಶೀರ್ವಾದದ ಮಳೆಗರೆಯಲಿ.

**ಇಂತಿ ಭಗವಂತನಲ್ಲಿ ತಮ್ಮವ**
**ವಿವೇಕಾನಂದ**

ಅನುವಾದ : *ಸ್ವಾಮಿ ಕರುಣಾಕರಾನಂದ*

# ವಿವೇಕ ವೈಭವ ಗಾಥಾ





ಸ್ವಾಮಿ ಜಗದಾತ್ಮಾನಂದ

## ನಡೆದಾಡುವ ವಿಶ್ವಕೋಶ

ಸ್ವಾಮಿ ವಿವೇಕಾನಂದರಿಗೆ ವಿದೇಶದಲ್ಲಿ ಉಪಕಾರವಾಗಬಹುದೆಂದು ಯೋಚಿಸಿ, ಒಬ್ಬ ಹಿರಿಯರು ವಿದ್ಯಾರಣ್ಯರ 'ಸರ್ವದರ್ಶನ ಸಂಗ್ರಹ' ಎನ್ನುವ ಗ್ರಂಥವನ್ನು ಅವರ ಕೈಯಲ್ಲಿಟ್ಟರು. ಆ ಗ್ರಂಥವನ್ನು ಸ್ವಾಮೀಜಿಯವರು ಬಿಡಿಸಿಯೂ ನೋಡದೆ, ಅದರ ಸಾರವನ್ನು ನಿರರ್ಗಳವಾಗಿ ಹೇಳಿ, ಪುಸ್ತಕವನ್ನು ಆ ಹಿರಿಯರಿಗೇ ಹಿಂದಿರುಗಿಸಿ ಮುಗುಳ್ನಕ್ಕರಂತೆ. ಅವರ ಜ್ಞಾನಭಂಡಾರ ಅಷ್ಟು ವಿಶಾಲವೂ ಆಳವೂ ಆಗಿತ್ತು. ಅದಷ್ಟೇ ಅಲ್ಲದೆ ಸ್ವಾಮೀಜಿ, ಆಧುನಿಕ ಯುಗದಲ್ಲಿ ವೈಜ್ಞಾನಿಕ ವಿಚಾರಧಾರೆಯಿಂದ ಬದಲಾದ ಸನ್ನಿವೇಶದಲ್ಲಿ, ಅತ್ಯುನ್ನತ ಆಧ್ಯಾತ್ಮಿಕ ಅನುಭೂತಿಯ ಜೊತೆಜೊತೆಗೆ ಜಗತ್ತಿನ ಇತಿಹಾಸ, ಸಂಸ್ಕೃತಿಯ ಹಿರಿಮೆ–ಗರಿಮೆ, ಹಾಗೂ ವಿದೇಶಿ ಧರ್ಮಗಳ ಹುಟ್ಟು, ಬೆಳವಣಿಗೆ, ಅವುಗಳ ಪ್ರಚಾರ–ವೈವಿಧ್ಯ – ಇವನ್ನೂ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದರು. ಹಾಗೂ ಇಡೀ ಜಗತ್ತೇ ಸ್ವೀಕರಿಸಬಹುದಾದ ವಿಶ್ವಸಮನ್ವಯ ಸಂದೇಶಗಳನ್ನು ಎಲ್ಲರಿಗೂ ಮನಮುಟ್ಟುವಂತೆ ವಿವರಿಸಿದ ಅಧಿಕಾರಕ ಪುರುಷರಾಗಿದ್ದರು.

## ವಿಶ್ವಭಾವೈಕ್ಯದ ಸಂದೇಶ

"ಧರ್ಮಸಮನ್ವಯದ ಆದರ್ಶವಾದ ಪ್ರೀತಿ ವಿಶ್ವಾಸ ಸೌಹಾರ್ದಗಳ ಭಾವಕ್ಕೆ ಕಾರಣವಾದ, ಎಲ್ಲರೂ ಒಪ್ಪಬೇಕಾದ, ವೈಜ್ಞಾನಿಕ ಸತ್ಯವೆಂದು ತಿಳಿಯಲಾದ ಸರ್ವಶಕ್ತ, ಸರ್ವವ್ಯಾಪಿ, ಸರ್ವಜ್ಞ, ಸರ್ವಾಂತರ್ಯಾಮಿಯಾದ ದೇವನೊಬ್ಬನೇ ಇದ್ದಾನೆ; ಅವನಿಗೆ ಇರುವ ನಾಮಗಳು ಮಾತ್ರ ಹಲವು" ಎನ್ನುವ ತತ್ತ್ವಕ್ಕೆ ಬದ್ಧರಾದ ಜನರು ಎಲ್ಲ ಧರ್ಮಗಳಲ್ಲಿಯೂ ಹಲವರಿದ್ದಿದ್ದರೆ, ಸ್ವಾಮಿ ವಿವೇಕಾನಂದರು ಕಂಡ ಕನಸು ನನಸಾಗುವುದು ಅಸಾಧ್ಯವಲ್ಲ. ಅತ್ಯಂತ ಪ್ರಾಚೀನ ಕಾಲದಲ್ಲೇ **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** ಎಂಬ ಋಷಿವಾಣಿಯ ಮೂಲಕ ಭಾರತ ನೀಡಿದ ಅತಿ ಶ್ರೇಷ್ಠ ಸಮನ್ವಯದ ಸಂದೇಶವನ್ನೇ ಪುನಃ ಭಗವಾನ್ ಶ್ರೀರಾಮಕೃಷ್ಣರು ತಮ್ಮ ಅನುಭೂತಿಯ ಬೆಳಕಿನಲ್ಲಿ ಆಧುನಿಕ ಯುಗದಲ್ಲಿ ಸಾರಿದ್ದಾರೆ. ಈ ಸಂದೇಶದ ಅರಿವು ಜಗತ್ತನ್ನೇ ನಾಶಗೊಳಿಸುವ ಅಣುಬಾಂಬಿನ ಸ್ಫೋಟದಿಂದ ನಮ್ಮನ್ನು ರಕ್ಷಿಸಬಲ್ಲದು.

## ಟಾಯನ್‌ಬಿಯ ಮಹತ್ವದ ನುಡಿಗಳು

ಜಗತ್ಪ್ರಸಿದ್ಧ ಇತಿಹಾಸಕಾರ ಟಾಯನ್‌ಬಿ, ೧೯೬೯ರಲ್ಲಿ ಪ್ರಕಟವಾದ ಸ್ವಾಮಿ ಘನಾನಂದರ, ಶ್ರೀರಾಮಕೃಷ್ಣರ ಬಗೆಗಿನ ಪುಸ್ತಕದ ತನ್ನ ಸುಪ್ರಸಿದ್ಧ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾನೆ:

"ಶ್ರೀರಾಮಕೃಷ್ಣರ ಸಂದೇಶ ಅತ್ಯಂತ ವಿಶಿಷ್ಟವಾದದ್ದು. ಅದು ಕಾರ್ಯರೂಪದಲ್ಲಿ ವ್ಯಕ್ತವಾದುದು. ಈ ಸಂದೇಶವು ಹಿಂದೂ ಧರ್ಮದ ಶಾಶ್ವತ ಸಂದೇಶವೂ ಹೌದು. ಅವರು ಭರತಖಂಡದಲ್ಲಿ ಉದಿಸಿದ ಪ್ರತಿಯೊಂದು ಪಂಥದ ವಿಧಿ ವಿಧಾನಗಳನ್ನು ಅನುಸರಿಸಿ ಸಾಧನೆ ಮಾಡಿದ್ದಲ್ಲದೇ, ಇಸ್ಲಾಂ ಮತ್ತು ಕ್ರೈಸ್ತ ಸಂಪ್ರದಾಯಗಳ ಸಾಧನಾಪದ್ಧತಿಗಳನ್ನೂ ಅನುಸರಿಸಿ, ಪೂರ್ಣ ಶ್ರದ್ಧೆಯಿಂದ ಮಾಡಿದ ಸಾಧನೆ ಮತ್ತು ಗಳಿಸಿಕೊಂಡ ಅನುಭವಗಳನ್ನು, ಹಿಂದೆಂದೂ ಯಾವ ಧರ್ಮದ ಧಾರ್ಮಿಕ ಮುಖಂಡರೂ ಭಾರತದಲ್ಲಾಗಲಿ, ಇತರ ದೇಶದಲ್ಲಾಗಲಿ ಪಡೆದುಕೊಂಡದ್ದು ಕಂಡುಬರುವುದಿಲ್ಲ.

ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ಸಂದಿಗ್ಧ ಸನ್ನಿವೇಶದಲ್ಲಿ ಬದುಕುತ್ತಿರುವ ನಮಗೆ ಇದೀಗ ಹೆಚ್ಚು ಸ್ಪಷ್ಟವಾಗುತ್ತಿದೆ. ಏನೆಂದರೆ ಮಾನವ ಜನಾಂಗ ಸ್ವನಾಶ, ಸರ್ವನಾಶವನ್ನು ಹೊಂದದಿರಬೇಕಾದರೆ, ಪಶ್ಚಿಮ ದೇಶಗಳಲ್ಲಿ ಪ್ರಾರಂಭವಾದ ಈ ಸಂದಿಗ್ಧ ಸನ್ನಿವೇಶವು ಭಾರತದಲ್ಲಿ